**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 17014/2016 DW-1**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜೇಶ್ವರಿ |
| ತಂದೆಯ ಹೆಸರು | : | ವಡೀವೇಲು |
| ವಯಸ್ಸು | : | 48 ವರ್ಷ |
| ವೃತ್ತಿ | : | ಗೃಹಿಣಿ |
| ವಾಸ | : | ಹನುಮಾನ್ ಲೇಔಟ್, ತಿಂಡ್ಲು, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 22.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ:</u>**

ಮಂಜುನಾಥ್ ಎಂಬುವವರ ಹೆಸರಿನಲ್ಲಿ ಕಾರ್ ಇದೆ. ಆ ಕಾರಿಗೂ ನನಗೂ ಯಾವುದೇ ಸಂಬಂಧವಿಲ್ಲ. ಮಂಜುನಾಥ್ ರವರು ಕಾರ್ ಟ್ರಾವಲ್ಸ್ ಮಾಡುತ್ತಾರೆ. 2015ನೇ ಇಸವಿಯಲ್ಲಿ ಮಂಜುನಾಥ್ ರವರಿಗೆ ಅಪಘಾತವಾಗಿ ಬೆನ್ನು ನೋವಾಗಿದ್ದು 4-5 ತಿಂಗಳು ಬೆಡ್ ರೆಸ್ಟ್ ನಲ್ಲಿದ್ದರು. ಆ ಸಮಯದಲ್ಲಿ ನನ್ನ ಒಂದು ಮನೆಯನ್ನು ಬೇರೆಯವರಿಗೆ ಲೀಸ್ ಗೆ ಕೊಟ್ಟಿದ್ದೆವು. ಮಂಗಳ ಎಂಬುವವರು ನನಗೆ ಮತ್ತು ಮಂಜುನಾಥ್ ರವರಿಗೂ ಸ್ನೇಹಿತರಾಗಿರುತ್ತಾರೆ. ಮಕ್ಕಳ ಶಾಲಾ ಶುಲ್ಕ, ಮನೆ ಬಾಡಿಗೆ, ಕಾರ್ ಲೋನ್, ಆಸ್ಪತ್ರೆಯ ಬಿಲ್ಲು ಕಟ್ಟಿಲ್ಲ ಎಂದು ಮಂಜುನಾಥ್ ರವರು ಮಂಗಳ ರವರ ಬಳಿ ಹೇಳಿಕೊಂಡರು. ಆಗ ಮಂಗಳ ರವರು ನನ್ನ ಬಳಿ ಬಂದು ಮಂಜುನಾಥ್ ರವರು ಈ ರೀತಿ ಕಷ್ಟದಲ್ಲಿದ್ದಾರೆ, ಕಾರನ್ನು ಸೇಲ್ ಮಾಡುತ್ತಿದ್ದೇವೆ, ಅದು ಸೇಲ್ ಆದ ನಂತರ ಆ ಹಣ ವಾಪಸ್ಸು ಕೊಡುತ್ತೇವ ಹಣ ಕೊಡಿ ಎಂದು ಕೇಳಿದರು. ಒಂದು ಬಾರಿ ರೂ.1 ಲಕ್ಷ, ಇನ್ನೊಂದು ಬಾರಿ ರೂ.1 ಲಕ್ಷ ಮತ್ತು ಮತ್ತೊಂದು ಬಾರಿ ರೂ.50 ಸಾವಿರ ಒಟ್ಟು 2 ಲಕ್ಷ 50 ಸಾವಿರಗಳನ್ನು ನಾನು

ಮಂಗಳರವರ ಮೂಲಕ ಮಂಜುನಾಥ್ ರವರಿಗೆ ಕೊಟ್ಟಿದ್ದೇನೆ. ನನ್ನ ಸ್ನೇಹಿತೆ ಮಂಗಳ ರವರು ಸಹ ರೂ.50 ಸಾವಿರವನ್ನು ಮಂಜುನಾಥ್ ರವರಿಗೆ ಕೊಟ್ಟಿದ್ದಾರೆ. ಮಂಗಳ ಮತ್ತು ಮಂಜುನಾಥ್ ರವರು ನಮ್ಮ ಮನಗೆ ಬಂದು ಕಾರ್ ಸೇಲ್ ಆಗಿದೆ ಎಂದು ಹೇಳಿ ಚಂದ್ರಶೇಖರ್ ರಾವ್ ರವರ ರೂ.1 ಲಕ್ಷದ ಒಂದು ಚೆಕ್ ಮತ್ತು 2 ಲಕ್ಷ ದ ಒಂದು ಚೆಕ್ ಅನ್ನು ನನಗೆ ತಂದು ಕೊಟ್ಟಿದ್ದಾರೆ. ಆ ಚೆಕ್ ಗಳಲ್ಲಿ ರೂ.2 ಲಕ್ಷದ 50 ಸಾವಿರ ಹಣ ನಾನು ಡ್ರಾ ಮಾಡಿಕೊಂಡು ಉಳಿದ 50 ಸಾವಿರವನ್ನು ಮಂಗಳವರಿಗೆ ನೀಡಿದನು. 4 ತಿಂಗಳ ನಂತರ ದೀಪಾವಳಿ ಹಬ್ಬದಂದು ಚಂದ್ರಶೇಖರ್ ರಾವ್ ರವರಿಂದ ಚೆಕ್ ಗಳನ್ನು ತೆಗೆದುಕೊಂಡಿದ್ದೀರಾ ಎಂದು ಕೋಡಿಗೆಹಳ್ಳಿ ಪೊಲೀಸ್ ಠಾಣೆ ರವರು ಫೋನ್ ಮಾಡಿ ಕೇಳಿದರು. ನಾನು ಚಂದ್ರಶೇಖರ್ ರಾವ್ ರವರಿಂದ ಚೆಕ್ ತೆಗೆದುಕೊಂಡಿಲ್ಲವೆಂದು ಪೊಲೀಸರಿಗೆ ಉತ್ತರಿಸಿದೆನು. ಆ ನಂತರ ನಾನು ಮತ್ತು ನನ್ನ ಸ್ನೇಹಿತೆ ಮಂಗಳಾ ಕೋಡಿಗೆಹಳ್ಳಿ ಪೊಲೀಸ್ ಠಾಣೆಗೆ ಹೋದೆವು. ನಾವು ಹೋದಾಗ ಕಾರಿನ ಮಾಲೀಕರಾದ ಮಂಜುನಾಥ್ ರವರು ಆ ಪೊಲೀಸ್ ಠಾಣೆಯಲ್ಲಿ ಇದ್ದರು. ನಾವು 03 ಜನರು ಪೊಲೀಸ್ ಠಾಣೆಯಲ್ಲಿ ಇದ್ದಾಗ ಪೊಲೀಸ್ ಇನ್ಸ್ ಪೆಕ್ಟರ್ ಬಂದು ನನ್ನಲ್ಲಿ ನಿಮ್ಮದು ಏನು ಸಮಸ್ಯೆ ಏಕೆ ಬಂದಿದ್ದೀರಿ ಎಂದು ಕೇಳಿದರು. ನಾನು ಕಾರಿನ ಮಾಲೀಕರಿಗೆ ಹಣ ಕೊಟ್ಟಿದ್ದು ಅವರು ಚೆಕ್ ಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದಾಗ ನಿನಗೂ ಇದಕ್ಕೂ ಸಂಬಂಧವಿಲ್ಲವೆಂದು ಹೋಗು ಎಂದು ಪೊಲೀಸ್ ಇನ್ಸ್ ಪೆಕ್ಟರ್ ರವರು ಹೇಳಿದರು. ನಾನು ಮತ್ತು ಮಂಗಳ ರವರು ವಾಪಸ್ಸು ಬಂದೆವು. ಮಂಜುನಾಥ್ ಮತ್ತು ಚಂದ್ರಶೇಖರ್ ರಾವ್ ರವರು ಪೊಲೀಸ್ ಠಾಣೆಯಲ್ಲಿ ಇದ್ದರು. ಕಾರು ಪೊಲೀಸ್ ಠಾಣೆಯಲ್ಲಿತ್ತು. ಕಾರಿನ ಕೀ ಪಿರ್ಯಾದುದಾರರಾದ ಚಂದ್ರಶೇಖರ್ ರಾವ್ ರವರ ಬಳಿ ಇತ್ತು. ಕಾರಿನ ಕೀಯನ್ನು ಮಂಜುನಾಥ್ ರವರಿಗೆ ನೀಡುವಂತೆ ಚಂದ್ರಶೇಖರ್ ರಾವ್ ರವರಿಗೆ ಹಾಗೂ ಚಂದ್ರಶೇಖರ್ ರಾವ್ ರವರು ಮಂಜುನಾಥ್ ರವರಿಗೆ ಹಣ ಕೊಡುವಂತೆ ಪೊಲೀಸ್ ಇನ್ಸ್ ಪೆಕ್ಟರ್ ರವರು ಹೇಳಿದರು. ಕಾರಿನ ಲೋನ್ 04 ತಿಂಗಳ ಕಂತು ಕಟ್ಟದ ಕಾರಣ ಬ್ಯಾಂಕ್ ನ 04 ಜನ

ಪೊಲೀಸ್ ಠಾಣೆಯಲ್ಲಿ ಇದ್ದರು. ನಾನು ಪೊಲೀಸ್ ಠಾಣೆಯಿಂದ ವಾಪಸ್ಸು ಬಂದೆನು.

ಎರಡು ವಾರದ ನಂತರ ಅಮೃತಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಕರೆ ಮಾಡಿ ನೀವು ಕಾರು ತೆಗೆದುಕೊಂಡು ಹಣ ಕೊಟ್ಟಿಲ್ಲಂತೆ ಎಂದು ಕೇಳಿದರು. ಆಗ ಕೋಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ನಡೆದಿರುವ ವಿಚಾರವನ್ನು ಅಮೃತಹಳ್ಳಿ ಪೊಲೀಸ್ ಠಾಣೆಯ ಪೊಲೀಸರಿಗೆ ಹೇಳಿದೆನು. ಚೆಕ್ ಗಳನ್ನು ಚಂದ್ರಶೇಖರ್ ರಾವ್ ರವರಿಂದ ಪಡೆದುಕೊಂಡಿಲ್ಲ ಮತ್ತು ಕಾರಿಗೂ ನನಗೂ ಸಂಬಂಧವಿಲ್ಲವೆಂದು ಒಂದು ಲೆಟರ್ ಬರೆದುಕೊಟ್ಟು ಹೋಗಿ ಎಂದು ಅಮೃತಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಹೇಳಿದರು. ಒಂದು ತಿಂಗಳ ನಂತರ ನ್ಯಾಯಾಲಯದಿಂದ ನೋಟಿಸು ಬಂದಿದೆ. ಆ ನಂತರ ಈ ಕೇಸು ಚಾಲ್ತಿಯಲ್ಲಿದೆ. ಕಾರು ನನ್ನ ಹೆಸರಿನಲ್ಲಿಲ್ಲ. ಕಾರಿನ ದಾಖಲೆಗಳಿಗೆ ಸಹಿ ಮಾಡಿಲ್ಲ, ಕಾರಿಗೂ ನನಗೂ ಯಾವುದೇ ಸಂಬಂಧವಿಲ್ಲ. ಆದುದರಿಂದ ನನ್ನನ್ನು ಆರೋಪ ಮುಕ್ತ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಿರ್ಯಾದುದಾರ ಪರ ವಕೀಲರಿಂದಃ**

ಕಾಲವಕಾಶ ಕೇಳಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**